SN – 009

## I Semester B.Com. Examination, Nov./Dec. 2014
## 2011-12 & Onwards (Repeaters Scheme)
## ಕನ್ನಡ – ಭಾಷಾ ಪತ್ರಿಕೆ - I
## ಸಾಹಿತ್ಯ ಸಲ್ಲಾಪ - 1

Time : 3 Hours | Max. Marks : 100

I. 1) ಈ ಪದ್ಯದ ಭಾವಾರ್ಥವನ್ನು ಬರೆಯಿರಿ. (1×6=6)

ಪೀತಾಂಬರಗಳ ಹೊದೆಯುವರಲ್ಲಿ
ಕೌಪೀನಕೆ ಚಿಂದಿಯು ಸಿಗದಿಲ್ಲಿ
ನೋಡುತ ನೋಡುತ ನೋಡುತ್ತಿದ್ದೆ
ನೋಡುತ್ತಿರೆಯಿರೆ ಬೆಚ್ಚಿಬಿದ್ದೆ
ಬಡಬಗ್ಗರ ಜಠರಾಗ್ನಿಯು ಎದ್ದು
ಗುಡಿಸಲುಗಳಿಗೇ ಬೆಂಕಿಯು ಬಿದ್ದು

2) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. (2×3=6)

ಜಠರಾಗ್ನಿ, ಪೂರ್ಣಚಂದ್ರ ತೇಜಸ್ವಿ,
ಗ್ರಾಮ ಸಂಸ್ಕೃತಿ , ಬೆಳ್ಳಿಲೋಟ.

II.1) ಇವುಗಳಲ್ಲಿ ಐದು ಪದಗಳಿಗೆ ಮೂಲ ಪದಗಳನ್ನು ಬರೆಯಿರಿ. (5×1=5)

ಕಾಲೇಜು , ಜನುಮ , ಫಳಾರ, ಗಳಾಸು , ಕುಲ್ಡಿ , ಬ್ಯಾಗು , ವಂಸ

2) ಐದು ಪದಗಳಿಗೆ ಅರ್ಥ ಬರೆಯಿರಿ. (5×1=5)

ಅಶ್ವ , ಧನಿಕ , ಕವಳ, ಕೈದು, ತೊತ್ತು, ಕಾಮಿನಿ, ಖತಿ.

3) ಐದು ಪದಗಳನ್ನು ಬಿಡಿಸಿ ಬರೆಯಿರಿ. (5×1=5)

ಕೌರವಾನುಜ, ದೇವಾಲಯ, ರಾಜ್ಯಾಡಳಿತ, ಊರೂರು, ನಿಟ್ಟುಸಿರು, ನೆಲದಾಧಾರ, ಹೆಬ್ಬಾಗಿಲು.

4) 'ಹೃದಯ ಕಮಲ' 'ಬೆಂಕಿಯಂತೆ' ಈ ಮಾದರಿಯ ಐದು ಉಪಮೆ ರೂಪಕಗಳನ್ನು ಸ್ವಂತವಾಗಿ ರಚಿಸಿ. (5×1=5)

P.T.O.

III. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (4×5=20)

1) ಕಳೆದು ಹೋದ ಬೆಳ್ಳಿಲೋಟ ಪುನ: ಕಂಡಾಗ ಧಣಿಯರಿಗೆ ಆತಂಕ ಉಂಟಾಗಲು ಕಾರಣವೇನು ?

2) ಪೂರ್ವಜನ್ಮದ ಸ್ಮರಣೆಯುಂಟಾದ ಸಂದರ್ಭದಲ್ಲಿ ನಂಬಿಯು ತನ್ನ ವರ್ತನೆಗೆ ಹೇಗೆ ಹಲುಬುತ್ತಾನೆ ?

3) ಅತ್ತೆಮ್ಮನ ಫಳಾರದ ಸ್ವಾರಸ್ಯವನ್ನು ಬರೆಯಿರಿ.

4) ಅಪಾರ್ಥೈಡ್ ಕಾನೂನುಗಳನ್ನು ಪ್ರತಿಭಟಿಸಿದ್ದಕ್ಕೆ ಕರಿಯರು ಅನುಭವಿಸಿದ ಹಿಂಸೆಯನ್ನು ತಿಳಿಸಿ.

5) ಪ್ರಾತಿಕಾಮಿಗೆ ದ್ರೌಪದಿ ಕೇಳಿದ ಪ್ರಶ್ನೆಗಳೇನು ?

6) ಸೂರಾಚಾರಿಯ ಅವನತಿಗೆ ಕಾರಣಗಳೇನು ?

IV. ಈ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (4×12=48)

1) ಶ್ರೀಮುಡಿಗೆ ಕೈಯಿಕ್ಕಿದನು ಕಾವ್ಯಭಾಗದ ಹಿನ್ನೆಲೆಯಲ್ಲಿ ದ್ರೌಪದಿಯ ಪಾತ್ರವನ್ನು ಚಿತ್ರಿಸಿ.

**ಅಥವಾ**

ವೃದ್ಧ ಮಾಹೇಶ್ವರನ ಪ್ರಸಂಗದ ಸ್ವಾರಸ್ಯವನ್ನು ಬರೆಯಿರಿ.

2) ಬೆಳ್ಳಿಲೋಟ ಕತೆಯಲ್ಲಿ ಸಾಮಾಜಿಕ ವೈರುಧ್ಯಗಳು ಚಿತ್ರಿತವಾದ ಬಗೆಯನ್ನು ವಿವರಿಸಿ.

**ಅಥವಾ**

ರಜಾಕಾರರು ನಡೆಸಿದ ದೌರ್ಜನ್ಯವನ್ನು ನಿಜಾಮ ಪ್ರೋತ್ಸಾಹಿಸಲು ಕಾರಣವೇನು ?

3) ಜನಾಂಗಭೇದ ಕುರಿತ ಲೇಖಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.

**ಅಥವಾ**

'ಬೆಂಗ್ಳೂರ್' ಅತ್ತೆಮ್ಮನ ಫಳಾರದಲ್ಲಿ ಕಂಡು ಬರುವ ವಿಡಂಬನೆಯ ಸ್ವರೂಪವನ್ನು ತಿಳಿಸಿ.

4) ಸೀಸರನ ಸಾವು ಅನಿವಾರ್ಯವಾಗಿತ್ತು ಎಂದು ಬ್ರೂಟಸ್ ಸಮರ್ಥಿಸಿಕೊಂಡದ್ದು ಹೇಗೆ ?

**ಅಥವಾ**

ಆಂಟೋನಿ , ಸೀಸರ್ , ಬ್ರೂಟಸ್ ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

---